ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು – 570017
ದೂರವಾಣಿ ಸಂಖ್ಯೆ: 0821-2343384

CHAMUNDESHWARI ELECTRICITY
SUPPLY CORPORATION LIMITED
(Government of Karnataka undertaking)
Corporate Office,
CESC, Mysuru-570017
Website: www.cescmysore.org
E-mail ID: agmtax@cescmysore.org

Company Identity Number[CIN]:- **U40109KA2004SGCO35177**

ಕ್ರಮಾಂಕ: ಸೆಸ್ಕ್/ತೆರಿಗೆ/03/12/2021-22/ Cys-2053 ದಿನಾಂಕ: 29 MAR 2022
ಲಗತ್ತು:

ಗೆ,
ಮುಖ್ಯ ಇಂಜಿನಿಯರ್(ವಿ) ವಲಯ ಕಛೇರಿ, ಮೈಸೂರು/ಹಾಸನ.
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ.
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಕಾ ಮತ್ತು ಪಾ ವಿಭಾಗ,
ಸಹಾಯಕ ಪ್ರಧಾನ ವ್ಯವಸ್ಥಾಪಕರು (ಆಂನಿ) ನಿಗಮ ಕಛೇರಿ,
ಚಾವಿಸನಿನಿ, ಮೈಸೂರು.

ಮಾನ್ಯರೇ,

**ವಿಷಯ:**-ಆರ್ಥಿಕ ವರ್ಷ 2021-22ರ ಅಂತಿಮ ಲೆಕ್ಕ ಪತ್ರದಲ್ಲಿ ತೆರಿಗೆ ಶಾಖೆಗೆ ಸಂಬಂಧಿಸಿದ ಅನುಬಂಧಗಳನ್ನು ಸಲ್ಲಿಸುವ ಬಗ್ಗೆ.

**ಉಲ್ಲೇಖ:** ನಿಗಮ ಕಛೇರಿ ಪತ್ರ ಸಂಖ್ಯೆ: Cys-404/ ದಿನಾಂಕ:07.07.2017, Cys-431/ದಿ.14.07.2017, Cys-455/ದಿ.21.07.2017, Cys-540/ದಿ.31.07.2017, Cys-940/ದಿ.04.11.2017. Cys-1180/ದಿ.26.12.2017. Cys-1178/ದಿ.26.12.2017, Cys-1307/ದಿ.20.01.2018, Cys-1336/ದಿ.27.01.2018. Cys-1380/ದಿ.03.02.2018. Cys-1499/ದಿ.06.03.2018. Cys-1111/ದಿ.15.11.2018. Cys-1174/ದಿ.30.11.2018, Cys-1921/ದಿ.27.03.2019, Cys-1539/ ದಿ.20.02.2020.

********

ದಿನಾಂಕ 01.07.2017 ರಿಂದ ಜಿ.ಎಸ್.ಟಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಹಿನ್ನಲೆಯಲ್ಲಿ ಹಲವು ಸುತ್ತೋಲೆ ಪತ್ರಗಳನ್ನು ಹೊರಡಿಸಲಾಗಿರುತ್ತದೆ. ಕಳೆದ ಸಾಲಿನಂತೆ ಈ ವರ್ಷವೂ ಸಹ ಮಾರ್ಚ್-2022ರ ಅಂತಿಮ ಲೆಕ್ಕಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ತೆರಿಗೆ ಶಾಖೆಯಿಂದ ಗೂಗಲ್ ಡ್ರೈವ್‌ನಲ್ಲಿ ಒದಗಿಸಲಾಗಿರುವ ಅನುಬಂಧಗಳಲ್ಲಿ ಮಾಹಿತಿಗಳನ್ನು ಸಲ್ಲಿಸುವಂತೆ ಸೂಚಿಸುತ್ತಾ, ಈ ಕೆಳಕಂಡ ದಿನಾಂಕಗಳ ಮುಂದೆ ಸೂಚಿಸಿರುವ, ಕಾರ್ಯ ಮತ್ತು ಪಾಲನೆ ವಿಭಾಗ/ವೃತ್ತ/ವಲಯಗಳ ಸಂಬಂಧಪಟ್ಟ ಸಹಾಯಕ ಲೆಕ್ಕಾಧಿಕಾರಿ/ ಹಿರಿಯ ಸಹಾಯಕ ಹಾಗೂ ಬಿ.ಪಿ.ಎ ಮತ್ತು ವಿಭಾಗ ಕಛೇರಿಯ ವಿಷಯ ನಿರ್ವಾಹಕರು ನಿಗಮ ಕಛೇರಿಯ ತೆರಿಗೆ ಶಾಖೆಗೆ ಈ ಕೆಳಕಂಡ ದಾಖಲಾತಿಗಳೊಂದಿಗೆ ಹಾಗೂ ಹೆಚ್ಚುವರಿ ದಾಖಲಾತಿಗಳು ಲಭ್ಯವಿದ್ದಲ್ಲಿ, ಸದರಿ ದಾಖಲಾತಿಗಳೊಂದಿಗೆ ಹಾಜರಾಗತಕ್ಕದ್ದು.

| ಕ್ರ ಸಂ | ಸಮನ್ವಯಗೊಳಿಸಲು ಹಾಜರಾಗಬೇಕಾದ ಲೆಕ್ಕಘಟಕಗಳು | ಪರಿಶೀಲನೆ ದಿನಾಂಕ | ನ್ಯೂನ್ಯತೆಗಳನ್ನು ಸರಿಪಡಿಸಿ ದೃಢೀಕೃತ ಮಾಹಿತಿ ಸಲ್ಲಿಸಲು ಕಡೆಯ ದಿನಾಂಕ | ಒದಗಿಸಬೇಕಾದ ದಾಖಲಾಲೆಗಳು |
|---|---|---|---|---|
| 1 | ಕಾ ಮತ್ತು ಪಾ ವಲಯ ಕಛೇರಿ, ಮೈಸೂರು | 18.04.2022 | 25.04.2022 (ಮಧ್ಯಾಹ್ನದ ನಂತರ) | ಏಪ್ರಿಲ್-2021 ರಿಂದ ಮಾರ್ಚ್ 2022 ರವರೆಗಿನ. • Month wise Cash Analysis, Head wise abstract & SDO wise consolidated report for FY 2021-22. |
| 2 | ಕಾ ಮತ್ತು ಪಾ ವೃತ್ತ ಕಛೇರಿ, ಮೈಸೂರು | | | |
| 3 | ಕಾ ಮತ್ತು ಪಾ ವೃತ್ತ ಕಛೇರಿ, ಮಂಡ್ಯ | | | |

| | | | | |
|---|---|---|---|---|
| 4 | ಕಾ ಮತ್ತು ಪಾ ವಲಯ ಕಛೇರಿ, ಹಾಸನ | 19.04.2022 | 26.04.2022 (ಮಧ್ಯಾಹ್ನದ ನಂತರ) | • JV's w.r to 61 & 62 series which attracts GST. Other than cash analysis Jv's<br>• Division Buy Back Bill Register.<br>• 28.103 and 46.922 Sale of Scrap documents and Tax Payment Details.<br>• 28.105 & 46.109 Debit Transaction Transferred to Income Head JV Analysis.<br>• IT Annexures, Challans & Form 27A, 27EQ etc and other IT filing ditails.<br>• Form 16A and as per Ann-33, TDS receivable.<br>• Form 27D as per Anne-206C(1h) Sales & Purchase. |
| 5 | ಕಾ ಮತ್ತು ಪಾ ವೃತ್ತ ಕಛೇರಿ, ಹಾಸನ | | | |
| 6 | ಕಾ ಮತ್ತು ಪಾ ವೃತ್ತ ಕಛೇರಿ, ಚಾಮರಾಜನಗರ-ಕೊಡಗು | | | |
| 7 | ಆಂತರಿಕ ನಿರ್ವಹಣೆ ಶಾಖೆ, ನಿಗಮ ಕಾರ್ಯಾಲಯ, ಮೈಸೂರು | | | |
| 8 | ಕಾ ಮತ್ತು ಪಾ ವಿಭಾಗ, ಕೆ.ಆರ್.ಪೇಟೆ | 20.04.2022 | 27.04.2022 (ಮಧ್ಯಾಹ್ನದ ನಂತರ) | |
| 9 | ಕಾ ಮತ್ತು ಪಾ ವಿಭಾಗ, ಮಂಡ್ಯ | 21.04.2022 | 28.04.2022 (ಮಧ್ಯಾಹ್ನದ ನಂತರ) | |
| 10 | ಕಾ ಮತ್ತು ಪಾ ವಿಭಾಗ, ಮದ್ದೂರು | 22.04.2022 | 29.04.2022 (ಮಧ್ಯಾಹ್ನದ ನಂತರ) | |
| 11 | ಕಾ ಮತ್ತು ಪಾ ವಿಭಾಗ, ನಾಗಮಂಗಲ | 25.04.2022 | 30.04.2022 (ಮಧ್ಯಾಹ್ನದ ನಂತರ) | |
| 12 | ಕಾ ಮತ್ತು ಪಾ ವಿಭಾಗ, ಪಾಂಡವಪುರ | 26.04.2022 | 02.05.2022 (ಮಧ್ಯಾಹ್ನದ ನಂತರ) | |
| 13 | ಕಾ ಮತ್ತು ಪಾ ವಿಭಾಗ, ಹೊಳೆನರಸೀಪುರ | 27.04.2022 | 04.05.2022 (ಮಧ್ಯಾಹ್ನದ ನಂತರ) | |
| 14 | ಕಾ ಮತ್ತು ಪಾ ವಿಭಾಗ, ಹಾಸನ | 28.04.2022 | 06.05.2022 (ಮಧ್ಯಾಹ್ನದ ನಂತರ) | |
| 15 | ಕಾ ಮತ್ತು ಪಾ ವಿಭಾಗ, ಸಕಲೇಶಪುರ | 29.04.2022 | 07.05.2022 (ಮಧ್ಯಾಹ್ನದ ನಂತರ) | |
| 16 | ಕಾ ಮತ್ತು ಪಾ ವಿಭಾಗ, ಚನ್ನರಾಯಪಟ್ಟಣ | 30.04.2022 | 09.05.2022 (ಮಧ್ಯಾಹ್ನದ ನಂತರ) | |
| 17 | ಕಾ ಮತ್ತು ಪಾ ವಿಭಾಗ, ಅರಸೀಕೆರೆ | 02.05.2022 | 10.05.2022 (ಮಧ್ಯಾಹ್ನದ ನಂತರ) | |
| 18 | ಕಾ ಮತ್ತು ಪಾ ವಿಭಾಗ, ಚಾಮರಾಜನಗರ | 04.05.2022 | 11.05.2022 (ಮಧ್ಯಾಹ್ನದ ನಂತರ) | |
| 19 | ಕಾ ಮತ್ತು ಪಾ ವಿಭಾಗ, ಮಡಿಕೇರಿ | 06.05.2022 | 12.05.2022 (ಮಧ್ಯಾಹ್ನದ ನಂತರ) | |
| 20 | ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ | 07.05.2022 | 13.05.2022 (ಮಧ್ಯಾಹ್ನದ ನಂತರ) | |
| 21 | ಕಾ ಮತ್ತು ಪಾ ವಿಭಾಗ, ಹುಣಸೂರು | 09.05.2022 | 16.05.2022 (ಬೆಳಗಿನ ಸಮಯದಲ್ಲಿ) | |
| 22 | ಕಾ ಮತ್ತು ಪಾ ವಿಭಾಗ, ಕೆ.ಆರ್.ನಗರ | 10.05.2022 | 16.05.2022 (ಮಧ್ಯಾಹ್ನದ ನಂತರ) | |
| 23 | ಕಾ ಮತ್ತು ಪಾ ವಿಭಾಗ, ಎನ್.ಆರ್.ಮೊಹಲ್ಲಾ | 11.05.2022 | 17.05.2022 (ಬೆಳಗಿನ ಸಮಯದಲ್ಲಿ) | |
| 24 | ಕಾ ಮತ್ತು ಪಾ ವಿಭಾಗ, ವಿ.ವಿ.ಮೊಹಲ್ಲಾ | 12.05.2022 | 17.05.2022 (ಮಧ್ಯಾಹ್ನದ ನಂತರ) | |
| 25 | ಕಾ ಮತ್ತು ಪಾ ವಿಭಾಗ, ನಂಜನಗೂಡು | 13.05.2022 | 18.05.2022 (ಮಧ್ಯಾಹ್ನದ ನಂತರ) | |

ಮಾರ್ಚ್-2021ರ ಅಂತಿಮ ಲೆಕ್ಕ ಪತ್ರಗಳ ಮಾಹಿತಿಯನ್ನು ಸಲ್ಲಿಸುವಾಗ ಈ ಕೆಳಕಂಡಂತೆ ನಿಯಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಿದೆ.

ಅ) **ಜಿ.ಎಸ್.ಟಿ.ಗೆ ಸಂಬಂಧಿಸಿದಂತೆ:-**

1) ಏಪ್ರಿಲ್-2021 ರಿಂದ ನಿರ್ವಹಿಸಿರುವ ಜಿ.ಎಸ್.ಟಿ ರಿಜಿಸ್ಟರ್, ತಾಳೆಪಟ್ಟಿ ಹಾಗೂ ಡಿ.ಸಿ.ಬಿ ನಗದು ವಿಶ್ಲೇಷಣೆಯಲ್ಲಿರುವಂತೆ ಸಂಗ್ರಹಿಸಿರುವ ಜಿ.ಎಸ್.ಟಿ ತೆರಿಗೆಯು ಪರಸ್ಪರ ತಾಳೆಯಾಗಿರತಕ್ಕದ್ದು. ಉದಾ: ಜಿ.ಎಸ್.ಟಿಗೆ ಸಂಬಂಧಿಸಿದಂತೆ ಡಿ.ಸಿ.ಬಿಯ ನಗದು ವಿಶ್ಲೇಷಣೆ ಪಟ್ಟಿಯ ಲೆಕ್ಕ ಶೀರ್ಷಿಕೆ 47.305, 47.306, 47.601, 55.101, 55.104, 55.106, 61.9047, 61.905, 61.9067, 61.9027, 62.9077, 61.922, 61.924, 61.908, 62.902, 62.908, 62.909, 62.917, 62.931, 62.932, 62.360, ಇತ್ಯಾದಿಗಳಲ್ಲಿ ಆರ್ಥಿಕ ವರ್ಷ 2021-22ರಲ್ಲಿ ಜಮಾ ಆಗಿರುವ ಮೊತ್ತಕ್ಕೆ ಸಮನಾಗಿ ಲೆಕ್ಕ ಶೀರ್ಷಿಕೆ 46.991, 46.992, 46.9947, 46.9957 ಮತ್ತು 46.9977, 46.9987ರಲ್ಲಿ ಅನ್ವಯಿಸುವ ದರಗಳಲ್ಲಿ ಜಿ.ಎಸ್.ಟಿಯನ್ನು ಸಂಗ್ರಹಿಸಿರತಕ್ಕದ್ದು. ಸದರಿ ಲೆಕ್ಕ ಶೀರ್ಷಿಕೆಗಳಲ್ಲಿ ಒಂದು ವೇಳೆ ಹೆಚ್ಚು ಅಥವಾ ಕಡಿಮೆ ಸಂಗ್ರಹಿಸಿದಲ್ಲಿ, ಅವುಗಳ ಕಾರಣಗಳನ್ನು ಕಂಡುಹಿಡಿದು ನಿಗಮದ/ ಜಿ.ಎಸ್.ಟಿ ನಿಯಮಾನುಸಾರ ತಮ್ಮ ಹಂತದಲ್ಲೇ ಸರಿಪಡಿಸತಕ್ಕದ್ದು. ಲೆಕ್ಕ ಶೀರ್ಷಿಕೆ 46.9947, 46.9957, 46.9977, ಮತ್ತು 46.9987ರಲ್ಲಿ ಮಾರ್ಚ್-2022ರಲ್ಲಿ ಸಂಗ್ರಹಿಸಿದ ಮೊತ್ತ ಮಾತ್ರ ಬಾಕಿ ಇರುವಂತೆ ಕ್ರಮವಹಿಸುವುದು.

2) ಜಿ.ಎಸ್.ಟಿ ಕಾಯ್ದೆಯ ಅನ್ವಯ Outward supply and Inward supply ನ ಮೇಲೆ ಸಂಗ್ರಹಿಸಬೇಕಾದ ಜಿ.ಎಸ್.ಟಿ ತೆರಿಗೆಗಳನ್ನು ಕೆಲವು ಲೆಕ್ಕಘಟಕಗಳಲ್ಲಿ ಡಿ.ಸಿ.ಬಿಯ ನಗದು ವಿಶ್ಲೇಷಣೆಗೆ ಅನುಗುಣವಾಗಿ ಸಂಗ್ರಹಿಸಿಲ್ಲವಾದಲ್ಲಿ, ವಸೂಲಾತಿ ಮಾಡದಿರುವ ಜಿ.ಎಸ್.ಟಿ ಮೊತ್ತವನ್ನು ಸಂಬಂಧಪಟ್ಟ ಗ್ರಾಹಕರು/ಗುತ್ತಿಗೆದಾರರಿಂದ ವಸೂಲಾತಿ ಮಾಡತಕ್ಕದ್ದು ಹಾಗೂ ಸಂಗ್ರಹ ಮಾಡದೇ ಇರುವ ಜಿ.ಎಸ್.ಟಿ ತೆರಿಗೆಗೆ ಸಂಬಂಧಿಸಿದ ಪೂರ್ಣ ವಿವರಗಳನ್ನು ಉಪ ವಿಭಾಗ/ಶಾಖೆಗಳಿಂದ ಕಾರಣ ಸಮೇತ ಪಡೆದು ಕ್ರೋಢೀಕರಿಸಿ ಸಲ್ಲಿಸಲು ಸೂಚಿಸಿದೆ.

3) ದಿನಾಂಕ 01.04.2021 ರಿಂದ ನಿಗಮ ಕಛೇರಿಗೆ ಸಲ್ಲಿಸಿರುವ Outward supply and Inward supply ಮಾಸಿಕವಾರು ಜಿ.ಎಸ್.ಟಿ ವಿವರಗಳನ್ನು ವಿಭಾಗಿಯ ಕಛೇರಿ ಮಟ್ಟದಲ್ಲಿ, ತಮ್ಮ ಅಧೀನದಲ್ಲಿ ಬರುವ ಎಲ್ಲಾ ಶಾಖೆ ಮತ್ತು ಲೆಕ್ಕ ಘಟಕದ ದೃಢೀಕೃತ ವಿವರಗಳನ್ನು ಮಾಸಿಕವಾರು, ಶಾಖಾವಾರು ಕ್ರೋಢೀಕರಿಸಿ ನಿರ್ವಹಿಸತಕ್ಕದ್ದು. ಹಾಗೂ ಸದರಿ ಮಾಹಿತಿಯು ಈಗಾಗಲೇ ಜಿ.ಎಸ್.ಟಿ ಪ್ರಾಧಿಕಾರಕ್ಕೆ ಪಾವತಿಗಾಗಿ ನಿಗಮ ಕಛೇರಿಗೆ ಸಲ್ಲಿಸಿರುವ ಮಾಹಿತಿಯೊಂದಿಗೆ ತಾಳೆಯಾಗಿರತಕ್ಕದ್ದು. ಮುಂದುವರೆದು, ಇವುಗಳಲ್ಲಿ ಏನಾದರು ವ್ಯತ್ಯಾಸವಿದ್ದಲ್ಲಿ ಅವುಗಳನ್ನು ತುರ್ತಾಗಿ ಸರಿಪಡಿಸಲು ಕ್ರಮ ಜರುಗಿಸತಕ್ಕದ್ದು.

4) ಆರ್ಥಿಕ ವರ್ಷ 2021-22ರ ಟ್ಯಾಕ್ಸಬಲ್ ಹಾಗೂ ನಾನ್ ಟ್ಯಾಕ್ಸಬಲ್ ಅನುಬಂಧ (GST-TNT) ಯಲ್ಲಿನ ಆದಾಯ ಲೆಕ್ಕ ಶೀರ್ಷಿಕೆಗಳಲ್ಲಿನ Debit Transaction ಗಳಿಗೆ ಸಂಬಂಧಪಟ್ಟ ಜೆ.ವಿ/ ಇತರೆ ದಾಖಲಾತಿಗಳ ದೃಢೀಕರಿಸಿ ಸಲ್ಲಿಸುವುದು.

ಆ) **ಆದಾಯ ತೆರಿಗೆಯ ಟಿ.ಡಿ.ಎಸ್‌ಗಳಿಗೆ ಸಂಬಂಧಿಸಿದಂತೆ:-**

1) ಲೆಕ್ಕಘಟಕಗಳು ತಮಗೆ ಸಂಬಂಧಿಸಿದ ಆದಾಯ ತೆರಿಗೆಯ ಟಿ.ಡಿ.ಎಸ್‌ಗೆ ಸಂಬಂಧಿಸಿದ ಟ್ಯಾನ್(TAN) ಸಂಖ್ಯೆಯಲ್ಲಿ ಸಂಬಂಧಿಸಿದ ಲೆಕ್ಕಘಟಕಗಳ ಹೆಸರು, ವಿಳಾಸ ಇತ್ಯಾದಿಗಳು ತಪ್ಪಿದ್ದಲ್ಲಿ ಸರಿಪಡಿಸಿ ನಿಗಮದ ಪ್ಯಾನ್ ಸಂಖ್ಯೆ AACCC6636P ಜೊತೆಗೆ ಟ್ಯಾನ್ ಸಂಖ್ಯೆಯನ್ನು ಪರಸ್ಪರ ಜೋಡಿಸಲು ಕ್ರಮ ಜರುಗಿಸತಕ್ಕದ್ದು.

2) ಆದಾಯ ತೆರಿಗೆ ಟಿ.ಡಿ.ಎಸ್‌ನ 24Q, 26Q ಮತ್ತು ಟಿ.ಸಿ.ಎಸ್‌ನ 27EQ ಗೆ ಸಂಬಂಧಿಸಿದಂತೆ ಲೆಕ್ಕ ಶೀರ್ಷಿಕೆ 46.9247, 46.9257 ಹಾಗೂ 46.9057ರಲ್ಲಿ ಇರುವ ಮೊತ್ತವನ್ನು ಸಕಾಲದಲ್ಲಿ ಆದಾಯ ತೆರಿಗೆ ಇಲಾಖೆಗೆ ಪಾವತಿಸುವುದು. ಹಾಗೂ ರಿಟರ್ನ್ಸ್ ಫೈಲಿಂಗ್ ಮಾಡಿರುವ ತ್ರೈಮಾಸಿಕವಾರು ವಿವರಗಳನ್ನು ಸಂಬಂಧಪಟ್ಟ ದಾಖಲಾತಿಗಳೊಂದಿಗೆ (ಚಲನ್, ಫೈಲಿಂಗ್ ಇತರೆ ವಿವರಗಳು) ನಿಗದಿತ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

3) ಮಾರ್ಚ್ ಅಂತಿಮ ಲೆಕ್ಕ ಪತ್ರದ ಲೆಕ್ಕ ಪರಿಶೋದನಾ ಸಂದರ್ಭದಲ್ಲಿ ತೆರಿಗೆ ಲೆಕ್ಕ ಪರಿಶೋಧಕರಿಗೆ ನೀಡುವ 3CA ಮತ್ತು 3CD ವಿವರಗಳನ್ನು ಲೆಕ್ಕ ಘಟಕಗಳು ಲಗತ್ತಿಸುವಾಗ ಕೋರಿರುವ ವಿವರಗಳನ್ನು, ಸಂಬಂಧಿಸಿದ ಟ್ಯಾನ್ (TAN) ಸಂಖ್ಯೆಯಲ್ಲಿ, ತ್ರೈಮಾಸಿಕವಾರು ಸಲ್ಲಿಸಿರುವ 24Q ಮತ್ತು 26Q ವಿವರಗಳೊಂದಿಗೆ ತಾಳೆ ಮಾಡಿ ಸಲ್ಲಿಸತಕ್ಕದ್ದು. ಹಾಗೂ ನಿಗಮದ ಆಸ್ತಿ ಮತ್ತು ವಾಹನ ಇತರೆ ಅನುಬಂಧಗಳನ್ನು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ತಾಳೆ ಮಾಡಿ ಸಲ್ಲಿಸತಕ್ಕದ್ದು.

4) ಲೆಕ್ಕ ಘಟಕಗಳು ತಮ್ಮ ಟ್ಯಾನ್ (TAN) ಸಂಖ್ಯೆಗಳಲ್ಲಿ ಯಾವುದೇ ರೀತಿಯ ಡೀಫಾಲ್ಟ್‌ಗಳು ಇಲ್ಲದಿರುವಂತೆ ಕ್ರಮ ಜರುಗಿಸತಕ್ಕದ್ದು.

5) **ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ:-** ಮೇಲ್ಕಂಡ ಉಲ್ಲೇಖಿತ ಸುತ್ತೋಲೆ ದಿನಾಂಕ: 03.02.2018 ರಂತೆ ಕ್ರಮ ಜರುಗಿಸುವುದು.

6) **ವೃತ್ತಿ ತೆರಿಗೆಗೆ ಸಂಬಂಧಿಸಿದಂತೆ:-** ನಿಗಮದ ಅಧಿಕಾರಿ/ನೌಕರರ ವೇತನದಿಂದ ಕಟಾವು ಮಾಡುವ ವೃತ್ತಿ ತೆರಿಗೆಗಳನ್ನು ಆನ್‌ಲೈನ್ ಮುಖಾಂತರ ಪ್ರಾಧಿಕಾರಕ್ಕೆ ಪಾವತಿಸಿದ ವಿವರಗಳನ್ನು ಸಲ್ಲಿಸುವುದು.

7) **ಜಿ.ಎಸ್.ಟಿ-ಟಿ.ಡಿ.ಎಸ್ (GSTR-7)ಗೆ ಸಂಬಂಧಿಸಿದಂತೆ**: ಉಲ್ಲೇಖಿತ ಪತ್ರ ದಿನಾಂಕ: 15.11.2018ರಂತೆ ಕ್ರಮ ಜರುಗಿಸುವುದು. ಹಾಗೂ ಜಿ.ಎಸ್.ಟಿ ರಿಟರ್ನ್ಸ್ ಫೈಲಿಂಗ್ ಮಾಡಿರುವ ವಿವರಗಳನ್ನು ನಿಗದಿತ ಅನುಬಂಧದಲ್ಲಿ ದಾಖಲಾತಿಗಳೊಂದಿಗೆ ಸಲ್ಲಿಸುವುದು.

8) **ಅನುಬಂಧ IT-TCS 206C(1H)**: ನಿಗಮದಿಂದ ಖರೀದಿ ಹುಂಡಿಯ ಜೊತೆ ಸರಕು ಮಾರಾಟದಾರರಿಗೆ ಪಾವತಿಸಲಾಗಿರುವ ಟಿ.ಸಿ.ಎಸ್ ಮೊತ್ತದ ವಿವರಗಳನ್ನು ಲೆಕ್ಕ ಶೀರ್ಷಿಕೆ 28.8227, 28.8237ರಡಿಯಲ್ಲಿ ಖರ್ಚಿನ ಬದಿಗೆ ಲೆಕ್ಕೀಕರಿಸಿ, ಸರಕು ಮಾರಾಟದಾರರ Form 27-D ಪಡೆದು, ನಿಗಮದ 26AS ಗೆ ತಾಳೆ ಮಾಡಿ, ತೆರಿಗೆ ಶಾಖೆಗೆ ವರ್ಗಾವಣೆ ಆದೇಶವನ್ನು (AT) ಮೂಲಕ ಸಲ್ಲಿಸತಕ್ಕದ್ದು.

9) IT-A33 ಅನುಬಂಧದಲ್ಲಿ ಗ್ರಾಹಕರು ಇತರೆ ಕಂದಾಯ ಪಾವತಿ ಮೊತ್ತದಲ್ಲಿ ಟಿ.ಡಿ.ಎಸ್ ಕಡಿತಗೊಳಿಸಿದ್ದಲ್ಲಿ, ಸದರಿ ಮೊತ್ತವನ್ನು ಲೆಕ್ಕ ಶೀರ್ಷಿಕೆ 28.8217ರಲ್ಲಿ ಲೆಕ್ಕೀಕರಿಸಿ, ಗ್ರಾಹಕರಿಂದ ಸದರಿ ಮೊತ್ತಕ್ಕೆ Form 16-A ಪಡೆದು ನಂತರ ತೆರಿಗೆ ಶಾಖೆಗೆ ವರ್ಗಾವಣೆ ಆದೇಶವ (AT) ಮುಖಾಂತರ ವರ್ಗಾಹಿಸಲು ಕ್ರಮ ಜರುಗಿಸುವುದು.

10) ಆರ್ಥಿಕ ವರ್ಷ 2020-21 ಹಾಗೂ 2021-22ನೇ ಸಾಲಿನ ಹುಂಡಿಗಳ ನಕಲಿ ಪ್ರತಿಗಳನ್ನು ಈಗಾಗಲೇ ಸೂಚಿಸಿರುವಂತೆ Spiral binding ಮಾಡಿಸಿ ಸಲ್ಲಿಸತಕ್ಕದ್ದು.

ಮೇಲ್ಕಂಡ ತೆರಿಗೆಗಳಿಗೆ ಸಂಬಂಧಿಸಿದಂತೆ ಪಾವತಿಸಿರುವ ಮತ್ತು ರಿಟರ್ನ್ಸ್ ಫೈಲಿಂಗ್ ಮಾಡಿರುವ ಬಗ್ಗೆ ಅವುಗಳ ದೃಢೀಕೃತ ಜೆರಾಕ್ಸ್ ಪ್ರತಿಗಳನ್ನು ನಿಗಮ ಕಛೇರಿಗೆ ಅಂತಿಮ ಲೆಕ್ಕದ ಅನುಬಂಧಗಳನ್ನು ಸಲ್ಲಿಸುವಾಗ ಅದರ ಜೊತೆಯಲ್ಲಿ ಸಲ್ಲಿಸಲು ಸೂಚಿಸಿದೆ ಮತ್ತು ಈ ಮೇಲೆ ನಿಗಧಿಪಡಿಸಿರುವ ದಿನಾಂಕಗಳ ಮುಂದೆ ಸೂಚಿಸಿರುವ ಲೆಕ್ಕಘಟಕಗಳು ತಪ್ಪದೆ ಸೂಕ್ತ ದಾಖಲಾತಿಗಳೊಂದಿಗೆ ತೆರಿಗೆ ಶಾಖೆಗೆ ಹಾಜರಾಗತಕ್ಕದ್ದು. ನಿಗಧಿಪಡಿಸಿರುವ ದಿನಾಂಕಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ. ಹಾಗೂ ಹೆಚ್ಚಿನ ಮಾಹಿತಿಗಾಗಿ ನಿಗಮ ಕಛೇರಿಯ ತೆರಿಗೆ ಶಾಖೆಯನ್ನು ಸಂಪರ್ಕಿಸಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ಮುಖ್ಯ ಆರ್ಥಿಕ ಅಧಿಕಾರಿ.

ಪ್ರತಿಗಳು:-

- ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ. ಪ) ಚಾವಿಸನಿನಿ, ನಿಗಮ ಕಛೇರಿ, ಮೈಸೂರು ರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.
- ನಿಯಂತ್ರಣಾಧಿಕಾರಿಗಳು ವಲಯ ಕಛೇರಿ, ಮೈಸೂರು/ಹಾಸನ, ರವರ ಮಾಹಿತಿಗಾಗಿ.
- ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು ಕಾ ಮತ್ತು ಪಾ ವೃತ್ತ ಕಛೇರಿಗಳು, ಚಾವಿಸನಿನಿ.
- ಉಪ ಪ್ರಧಾನ ವ್ಯವಸ್ಥಾಪಕರು (ಎಮ್.ಐ.ಎಸ್), ನಿಗಮದ ಅಧಿಕೃತ ಅಂತರ್ಜಾಲ ತಾಣದಲ್ಲಿ ಪ್ರಕಟಿಸಲು.
- ಆಪ್ತ ಕಾರ್ಯದರ್ಶಿ, ವ್ಯನಿ/ನಿ(ತಾಂ)/ಮುಆಅ.
- ಎಲ್ಲಾ ಲೆಕ್ಕಾಧಿಕಾರಿಗಳು (ಆಂ ಪ) ಕಾ ಮತ್ತು ಪಾ. ವಿಭಾಗಗಳು/ವೃತ್ತಗಳು, ಚಾವಿಸನಿನಿ.
- ಮು.ಕ.